# ಬುದ್ಧಿವಂತ ರಾಜಕುಮಾರ

■ ಗುರುನಾಥ ಸುತಾರ
ಚಿತ್ರ: ಸಂತೋಷ್ ಸಸಿಹಿತ್ಲು

ಅಮರಾವತಿ ರಾಜ್ಯವನ್ನು ಅಖಿಲೇಶ ವರ್ಮ ಎಂಬ ರಾಜ ಆಳುತ್ತಿದ್ದ. ಅವನಿಗೆ ಒಬ್ಬ ಮಗಳು, ಚಂದ್ರಮುಖಿ ಎಂದು ಹೆಸರು. ಹೆಸರಿಗೆ ತಕ್ಕಂತೆ ಆಕೆ ನೋಡಲು ತುಂಬಾ ಆಕರ್ಷಕವಾಗಿದ್ದಳು. ಚಂದ್ರನಂತೆ ಹೊಳೆವ ಮುಖಭಾವ ಹಾಗೂ ಬುದ್ಧಿವಂತಳೂ ಆಗಿದ್ದಳು. ಈಕೆಗೆ ಮದುವೆ ವಯಸ್ಸು ಆಗಿದ್ದುದರಿಂದ, ರಾಜ ಮದುವೆ ಮಾಡಲು ನಿರ್ಧರಿಸುತ್ತಾನೆ. ಇಂಥ ಸುಂದರ ರಾಜಕುಮಾರಿಯನ್ನು ಮದುವೆಯಾಗಲು ರಾಜಕುಮಾರರು ಸಾಲುಗಟ್ಟಿ ನಿಲ್ಲುತ್ತಾರೆ. ಅಲ್ಲಿ ಬಂದ ಅನೇಕ ರಾಜಕುಮಾರರಲ್ಲಿ ಅಖಿಲೇಶ ವರ್ಮ ಕೇವಲ ಮೂವರನ್ನು ಸವಾಲು ಜವಾಬುಗಳ ಮೂಲಕ ಆಯ್ಕೆ ಮಾಡುತ್ತಾನೆ. ಇನ್ನು ಇವರಿಗೆ ಮತ್ತೊಂದು ಸುತ್ತಿನ ಸವಾಲು ನೀಡಿ ಅದರಲ್ಲಿ ಉತ್ತೀರ್ಣರಾದವರಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಬೇಕೆಂದು ನಿರ್ಧರಿಸುತ್ತಾನೆ.

ಆ ಮೂವರು ರಾಜಕುಮಾರರು ಒಂದು ವಾರದ ನಂತರ ಮತ್ತೆ ಅರಮನೆಗೆ ಬರಬೇಕೆಂದು ತಿಳಿಸುತ್ತಾನೆ. ರಾಜನ ಆಣತಿಯಂತೆ ಒಂದುವಾರ ಕಳೆದ ನಂತರ ಅವರು ಅಮರಾವತಿ ಆಸ್ಥಾನಕ್ಕೆ ಬರುತ್ತಾರೆ. ಅವರು ಬಂದದ್ದನ್ನು ನೋಡಿ ಸಂತಸಪಟ್ಟ ರಾಜ ಅವರ ಯೋಗಕ್ಷೇಮ ವಿಚಾರಿಸುತ್ತಾನೆ. 'ನಿಮಗೆ ಇನ್ನೊಂದು ಪರೀಕ್ಷೆ ತೆಗೆದುಕೊಳ್ಳಬಹುದಾ' ಎಂದು ಪ್ರಶ್ನಿಸುತ್ತಾನೆ. ಅವರು 'ಆಗಲಿ ಮಹಾರಾಜ' ಎನ್ನುತ್ತಾರೆ.

'ನಿಮ್ಮ ಅರಮನೆ ಬನದಲ್ಲಿ ನಿಮಗೆ ಪ್ರಿಯವಾದ ಹಾಗೂ ಉತ್ತಮ ಫಲ ನೀಡಬಹುದಾದ ಒಂದು ಸಸಿ ತರಬೇಕು' ಎನ್ನುತ್ತಾನೆ. ಇದಕ್ಕೆ ತಮಗೆ ಮತ್ತೆ ಒಂದು ವಾರ ಅವಕಾಶವಿದೆ ಎಂದು ಹೇಳಿ ಕಳುಹಿಸುತ್ತಾನೆ. ಆಯ್ತು ಎಂದು ರಾಜಕುಮಾರರು ಮರಳಿ ಹೋಗುತ್ತಾರೆ. ಒಂದು ವಾರದ ಬಳಿಕ ತಮ್ಮ ತಮ್ಮ ರಾಜ್ಯದ ಮಂತ್ರಿಗಳೊಂದಿಗೆ ಒಂದೊಂದು ಸಸಿ ತೆಗೆದುಕೊಂಡು ಬರುತ್ತಾರೆ. ರಾಜನಿಗೆ ಮೂವರ ನಿಷ್ಠೆಯ ಬಗ್ಗೆ ಹೆಮ್ಮೆ ಮೂಡುತ್ತದೆ.

'ನೀವು ತಂದ ಮಾವು, ಸೀತಾಫಲ ಹಾಗೂ ದಾಳಿಂಬೆ ಸಸಿಗಳು ತುಂಬಾ ಉಪಯುಕ್ತವಾದವುಗಳು. ಇವುಗಳನ್ನು ನಿಮ್ಮ ನಿಮ್ಮರಾಜ್ಯಕ್ಕೆ ತೆಗೆದುಕೊಂಡು ಹೋಗಿ. ಮತ್ತೆ ಒಂದು ತಿಂಗಳ ನಂತರ ಅವುಗಳನ್ನು ಇದ್ದ ಸ್ಥಿತಿಯಲ್ಲಿ ಹುಷಾರಾಗಿ ತೆಗೆದುಕೊಂಡು ಬನ್ನಿ' ಎಂದು ಹೇಳಿ ಕಳುಹಿಸುತ್ತಾನೆ. ಇದೇ ನಿಮಗೆ ಕೊನೆ ಸವಾಲು, ಇದರಲ್ಲಿ ಯಾರು ಗೆಲ್ಲುತ್ತೀರೋ ಅವರಿಗೆ ನನ್ನ ಮಗಳು ಚಂದ್ರಮುಖಿಯನ್ನು ಧಾರೆ ಎರೆಯುತ್ತೇನೆ ಎಂದು ರಾಜ ತಿಳಿಸುತ್ತಾನೆ.

ಕಳಿಂಗ, ಕಾವಂತಿ ಮತ್ತು ವಿಭದ್ರ ನಾಡಿನ ರಾಜಕುಮಾರರು ಮತ್ತೆ ಒಂದು ತಿಂಗಳ ನಂತರ ಅಖಿಲೇಶ ವರ್ಮನ ಬಳಿಗೆ ಬರುತ್ತಾರೆ. ಕಳಿಂಗ ರಾಜಕುಮಾರನ ಕೈ ಖಾಲಿ ಇರುತ್ತದೆ. ಕಾವಂತಿ ರಾಜಕುಮಾರ ತಂದಿದ್ದ ಸೀತಾಫಲ ಸಸಿ ಒಣಗಿರುತ್ತದೆ. ವಿಭದ್ರ ನಾಡಿನ ರಾಜಕುಮಾರನ ದಾಳಿಂಬೆ ಸಸಿ ಬಾಡಿ ನೆಲಕ್ಕೆ ಬೀಳುವ ಸ್ಥಿತಿಯಲ್ಲಿರುತ್ತದೆ. ಇದನ್ನು ನೋಡಿ ಆಶ್ಚರ್ಯ ಚಕಿತನಾದ ರಾಜನು ಕಳಿಂಗ ರಾಜಕುಮಾರನಿಗೆ ಆತ ತಂದ ಸಸಿ ಬಗ್ಗೆ ಪ್ರಶ್ನಿಸುತ್ತಾನೆ.

'ಮಹಾರಾಜ ಅದು ಬೆಳೆಯುವಷ್ಟು ಪೂರಕವಾದ ನೆಲ ಅಗೆದು ಅದನ್ನು ಅರಮನೆಯ ಬನದಲ್ಲಿ ಪೋಷಿಸುತಿದ್ದೇನೆ. ಈಗ ಅದು ಎತ್ತರ ಬೆಳೆದಿದೆ. ಅದನ್ನು ಕಿತ್ತು ತರಲು ಮನಸ್ಸು ಮಾಡಲಿಲ್ಲ' ಎಂದು ವಿನಮ್ರನಾಗಿ ಹೇಳಿದನು. ರಾಜ ಮೌನವಹಿಸಿದರು.

ಮಹಾರಾಜರೇ ಈಗ ತಮ್ಮ ಸವಾಲು ಯಾವುದೆಂದು ತಿಳಿಸಿ ಎಂದು ಮೂವರು ರಾಜಕುಮಾರರು ಕೇಳಿಕೊಂಡರು. ಆಗ ರಾಜನು 'ನಿಮಗೆ ಸವಾಲು ಮಾಡಿದ್ದೂ ಆಗಿದೆ. ನಿಮ್ಮಿಂದ ಉತ್ತರ ಸಿಕ್ಕಿದ್ದೂ ಆಗಿದೆ. ನನ್ನ ಸವಾಲಿನಲ್ಲಿ ಕಳಿಂಗ ರಾಜ್ಯದ ರಾಜಕುಮಾರ ಗೆದ್ದಿರುತ್ತಾನೆ. ಆತನಿಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡುವೆ' ಎಂದು ತಿಳಿಸುತ್ತಾನೆ.

ಒಂದು ಸಸಿ, ಗಿಡವಾಗಿ ಮರವಾಗಿ ಫಲ ಪುಷ್ಪ ನೀಡಬೇಕಾದರೆ ಅದನ್ನು ಹಾಗೆಯೇ ಜೋಪಾನವಾಗಿ ಕಾಪಾಡಿಕೊಂಡು ಬಂದ ಮಾತ್ರಕ್ಕೆ ಸಾಧ್ಯವಿಲ್ಲ. ಅದಕ್ಕೆ ಅಗತ್ಯ ಪೋಷಕಾಂಶವನ್ನು ಹಾಕಿ ಸಂರಕ್ಷಿಸಬೇಕಾಗುತ್ತದೆ. ಆಗ ಮಾತ್ರ ಸಾರ್ಥಕತೆಯನ್ನು ಸಾಧಿಸಲು ಸಾಧ್ಯ. ಆ ಕೆಲಸ ಕಳಿಂಗ ರಾಜಕುಮಾರ ಮಾಡಿದ್ದಾನೆ ಎಂದು ಹೇಳಿದಾಗ ಅಲ್ಲಿ ಸಂತಸದ ನಗೆ ಹೊಮ್ಮಿತ್ತು. ■

